ಇರಲಿಲ್ಲ. ನಾನು ಸುಮಾರು ನೂರು ವರ್ಷಗಳ ಹಿಂದೆ ಅನುಭವಿಸುತ್ತಿದ್ದಂಥ ವಾತಾವರಣವನ್ನು ಕಾಣಲಾರಂಭಿಸಿದೆ. ವಾಹನದ ಸೈಲೆನ್ಸರಿನ, ಕಾರ್ಖಾನೆಗಳ ಚಿಮಿಣಿಯ ಹೊಗೆಯಿಲ್ಲದೇ ವಾತಾವರಣ ನಿರ್ಮಲವಾಯಿತು. ಅಯ್ಯೋ, ಈ ಜೀವನ ಹೀಗೆಯೇ ಇದ್ದುಬಿಡಬಾರದೇ, ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಡಬಾರದೇ ಎಂದು ಅನೇಕ ಸಲ ಆಲಾಪಿಸಿದೆ. ಆದರೆ ಭವಿಷ್ಯ ಯಾರಿಗೂ ಗೊತ್ತಾಗುವುದಿಲ್ಲವಾದರೂ ನನಗೆ ಗೊತ್ತಿತ್ತು, ಒಂದಲ್ಲ ಒಂದು ದಿನ ಇವರು ಒಂದೇ ಸಲ ಬಾಗಿಲು ತೆಗೆದುಕೊಂಡು ಹೊರಬಂದು ಮತ್ತೆ ಯಥಾಸ್ಥಿತಿಯನ್ನು ಮುಂದುವರೆಸುತ್ತಾರೆಂದು. ನನ್ನ ಮೇಲೇ ನೂರಾರು ವರ್ಷ ಆಡಿಬೆಳೆದ ಮರ್ಕಟಗಳ ಮನಸ್ಥಿತಿಯನ್ನು ನಾನು ಕಂಡಿಲ್ಲವೇ? ಇನ್ನು ಅವುಗಳೇ ಪೂರ್ವಜರಾಗಿರುವ ಈ ಮನುಷ್ಯರ ಗುಣಗಳನ್ನು ಬದಲಾಯಿಸಲಾದೀತೇ?

ಕೋವಿಡ್‌ನಿಂದಾಗಿ ಜನನಿಬಿಡವಾಗಿದ್ದ ಸ್ಥಳಗಳು ನಿರ್ಜನವಾಗಿದ್ದವು. ಅತ್ಯವಶ್ಯಕವಾಗಿದ್ದ ಜನಗಳು ಮಾತ್ರ ಅಗತ್ಯ ಅನುಮತಿಯೊಂದಿಗೆ ಓಡಾಡಲಾರಂಭಿಸಿದ್ದರು. ಅಂಥದರಲ್ಲಿ ನನ್ನ ಉಳಿವಿಗಾಗಿನ ಚಳವಳಿಗೆಂದು ಇನ್ನಾವ ಜನ ಬಂದಾರು. ಅದರ ಅಗತ್ಯವಾದರೂ ಏನು ಎಂದು ನಾನೂ ಸುಮ್ಮನಾಗಿದ್ದೆ. ಮೊನ್ನೆಮೊನ್ನೆಯ ವಸಂತಕ್ಕೆ ಚಿಗುರಿದ್ದ ಕೆಂಪೆಲೆಗಳು ಹಚ್ಚಹಸಿರಿನ ಬಣ್ಣಕ್ಕೆ ತಿರುಗಿದ್ದವು. ನಿರಾತಂಕವಾಗಿ ತಮ್ಮ ಪತ್ರಹರಿತ್ತಿನಿಂದ ಸೂರ್ಯನ ಕಿರಣಗಳನ್ನು ಆಸ್ವಾದಿಸುತ್ತ, ಆಹಾರ ತಯಾರಿಸುತ್ತ, ಬೇರಿನಿಂದ ಬರುತ್ತಿದ್ದ ಸಮೃದ್ಧ ನೀರನ್ನು ಕುಡಿದು, ಉಳಿದುದನ್ನು ಆಮ್ಲಜನಕದ ಜೊತೆ ಬೆರೆಸಿ ವಾತಾವರಣಕ್ಕೆ ಬಿಡುತ್ತ, ತಂಪಾದ ಆಹ್ಲಾದಕರವಾದ ಗಾಳಿಯನ್ನು ನಿಸರ್ಗಕ್ಕೆ ಸೇರಿಸುತ್ತ ಒಂದು ರೀತಿಯ ಧನ್ಯತಾಭಾವವನ್ನೂ ಅನುಭವಿಸುತ್ತಿದ್ದೆ. ನಿರಾತಂಕವಾಗಿ ಮೊಟ್ಟೆಯಿಟ್ಟು ಮರಿಮಾಡುತ್ತಿದ್ದ ಅದೆಷ್ಟೋ ಪಕ್ಷಿಸಂಕುಲ ಸಮೃದ್ಧವಾಗಿ ತಮ್ಮ ಸಂತಾನವನ್ನು ವೃದ್ಧಿಗೊಳಿಸಿಕೊಂಡು ಹಾರಿಹೋಗುತ್ತಿದ್ದವು.

ಲಾಕ್‌ಡೌನ್ ಎನ್ನುವುದು ಸೀಲ್‌ಡೌನ್ ಎನ್ನುವತ್ತ ಜಾರಿ ಇಡೀ ವಾತಾವರಣವನ್ನೇ ಇನ್ನಷ್ಟು ಬಿಗಡಾಯಿಸಿಬಿಟ್ಟಿತು. ಆದರೆ ಅದರೊಂದಿಗೇ ಉಸಿರುಗಟ್ಟಿಸಿದ ಜೈಲುವಾಸದಂಥ ಜೀವನ ಜನರನ್ನು ದುರ್ಬಲಗೊಳಿಸಿತು. ಉಣ್ಣಲಿಲ್ಲದೇ, ತಿನ್ನಲಿಲ್ಲದೇ ಜನ ದಂಗೆಯೆದ್ದರು. ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಡಿರಿ, ನಮ್ಮನಮ್ಮ ಊರುಗಳಿಗೆ ಹೋಗಿ, ಅಲ್ಲಾದರೂ ನಮ್ಮ ದಿನನಿತ್ಯದ ಗಂಜಿಯನ್ನು ಕಂಡುಕೊಳ್ಳುತ್ತೇವೆ ಎಂದು.

ಇನ್ನೇನು ಬರಲಿರುವ ಚುನಾವಣೆಯ ನೆಪವಿಟ್ಟುಕೊಂಡು ಇದೇ ಸಂದರ್ಭವನ್ನು ನಗದೀಕರಿಸಿಕೊಂಡ ಮರಿಪುಡಾರಿಗಳು ಮನೆಮನೆಗೆ ಹೋಗಿ, ಹಸಿದವರಿಗೆ ಅನ್ನ, ಬಡಬಗ್ಗರಿಗೆ ದವಸಧಾನ್ಯ, ಮಕ್ಕಳುಮರಿಗಳಿಗೆ ಹಾಲು ಮುಂತಾದವನ್ನು ಪುಕ್ಕಟೆಯಾಗಿ ಹಂಚಲಾರಂಭಿಸಿದರು. ಆದರೆ ಅದರ ಜೊತೆಗೆ ನೂರಾರು ಸಾವಿರಾರು ಫೋಟೋಗಳು ಕ್ಲಿಕ್ಕಿಸಿಕೊಳ್ಳಲಾರಂಭಿಸಿದರು.

## ಇಲ್ಲಿಯವರೆಗೆ...



ಮಹಾವೃಕ್ಷವನ್ನು ರಕ್ಷಿಸುವ ಹೊಣೆಗಾರಿಕೆಯಿಂದ ಮುಖ್ಯಮಂತ್ರಿಗಳೂ ತಪ್ಪಿಸಿಕೊಂಡರು. ಅದೇ ಸಮಯಕ್ಕೆ ಮರದ ಮಾತುಗಳನ್ನು ಆಲಿಸುತ್ತಾನೆಂಬ ಖ್ಯಾತಿಯ ಸಸ್ಯವಿಜ್ಞಾನಿಯೊಬ್ಬ ಅಲ್ಲಿಗೆ ಬಂದ. ತಂತಿಗಳನ್ನು ಮರಕ್ಕೆ ಸಿಕ್ಕಿಸಿ ಅದರ ಮಾತುಗಳನ್ನು ಆಲಿಸಲು ಪ್ರಯತ್ನಿಸಿ ವಿಫಲನಾದ. ಹೀಗೆ ಎಲ್ಲ ಪ್ರಯತ್ನಗಳೂ ವಿಫಲವಾದ ನಂತರ, ಅಭಿವೃದ್ಧಿಯ ಕಾಮಗಾರಿಗಳಿಗೆ ಚಾಲನೆ ದೊರೆಯಿತು. ಶಂಕುಸ್ಥಾಪನೆ ನೆರವೇರಿಸಿದ ಸಚಿವರು, ಮಹಾವೃಕ್ಷ ಇರುವ ಸ್ಥಳದಲ್ಲಿ ಎದ್ದುನಿಲ್ಲುವ ಆಧುನಿಕ ಸ್ವರ್ಗದ ಬಗ್ಗೆ ಬಡಾಯಿ ಕೊಚ್ಚಿಕೊಂಡರು. ಅವರ ಮಾತುಗಳ ಮೂಲಕ ಮಹಾವೃಕ್ಷವನ್ನು ಕಡಿಯುವ ಸುಳಿವು ದೊರೆತು, ಸ್ಥಳೀಯರು ಪ್ರತಿಭಟನೆ ಆರಂಭಿಸಿದರು. ಸಿನಿಮಾ ನಟ, ಸಾಹಿತಿ, ಸ್ವಾಮೀಜಿ ಸೇರ್ಪಡೆಯೊಂದಿಗೆ ಆ ಪ್ರತಿಭಟನೆ ತೀವ್ರವಾಯಿತು. ಆದರೆ, ಈ ಪ್ರತಿಭಟನೆ ಲೆಕ್ಕಿಸದವನಂತೆ ಗುತ್ತಿಗೆದಾರ ತನ್ನ ಕೆಲಸವನ್ನು ಆರಂಭಿಸಿದ.

ಪತ್ರಿಕೆಗಳಲ್ಲಿರಲಿ, ಸಾಮಾಜಿಕ ಜಾಲತಾಣಗಳಲ್ಲಂತೂ ಅವುಗಳ ಭರಾಟೆ ಎಷ್ಟಿತ್ತೆಂದರೆ ವಾಕರಿಕೆಯಾಗಿಬಿಡುವಂತಿತ್ತು. ಕೊಡು ವವರು ಸ್ವಯಂ ದಾನಿಗಳಂತೆಯೇ ಬಿಂಬಿಸಿಕೊಳ್ಳಲಾರಂಭಿಸಿದರು. ನಿಜವಾಗಿ ದಾನ ಕೊಡುವವರು ಎಡಗೈಗೂ ಕೂಡ ಗೊತ್ತಾಗದಂತೆ ಕೊಡುತ್ತಾರೆ. ಆದರೆ ಇಲ್ಲಿ ಲಜ್ಜೆಯೇ ಇಲ್ಲದೆ ದಾನವೆಂಬ ಪದ ಬಳಕೆಯಾಗಿಹೋಯಿತು. ಇಸಕೊಂಡವರು ಯಾರೂ ಆ ಫೋಟೋಗಳಿಗೆ ಪೋಸುಕೊಡಲೂ ನಾಚಿಕೊಂಡು ಅವಮಾನದಿಂದ ಮುಖ ತಿರುಗಿಸಿಕೊಳ್ಳುವಂತಾಯಿತು. ವಿಪರ್ಯಾಸವೆಂದರೆ ಯಾರು ಮತದಾರರ ಪಟ್ಟಿಯಲ್ಲಿ ಇದ್ದಾರೋ ಅಂಥವರಿಗೆ ಮಾತ್ರ ಇವರು ತಮ್ಮ ಇಷ್ಟುದ್ದದ ಸಹಾಯಹಸ್ತವನ್ನು ಚಾಚಿದ್ದು!

ಲಾಕ್‌ಡೌನಿನ ದಿನಗಳನ್ನು ಇನ್ನಷ್ಟು ವಿಸ್ತರಿಸಬೇಕೆನ್ನುವ ಇರಾದೆ ವ್ಯಕ್ತಪಡಿಸಿದ ಪ್ರಧಾನಿಗಳು, ಕಾರ್ಮಿಕರೆಲ್ಲ ಅತಂತ್ರವಾದ ಬದುಕು ಬದುಕುವುದಕ್ಕಿಂತ ಅವರವರ ಊರು ಸೇರಿಕೊಂಡುಬಿಡಲಿ ಎಂದು ವಿಶೇಷ ಬಸ್ಸು, ರೈಲುಗಳ ಮೂಲಕ ಮೂಲ ಸ್ಥಳಗಳಿಗೆ ಸೇರಿಕೊಳ್ಳಲು ವ್ಯವಸ್ಥೆ ಮಾಡಿಸಿದರು. ಆಗ ನನ್ನನ್ನು ಬುಡಮೇಲು ಮಾಡಲು ಬಂದಿದ್ದ ಜನರಲ್ಲನೇಕರು ಉಟ್ಟಬಟ್ಟೆಯಲ್ಲಿ ತಮ್ಮತಮ್ಮ ಊರುಗಳಿಗೆ ಹೊರಟುಬಿಟ್ಟರು. ತನ್ನ ಕಂಪನಿಯ ಪರವಾಗಿಯೂ, ನನ್ನ ವಿರುದ್ಧವಾಗಿಯೂ ಅಪಹಾಸ್ಯದ ಮಾತಾಡುತ್ತಿದ್ದ ಜನರು ನನ್ನನ್ನು ಕಡಿಯಲು ಮುಂದಾಗಿದ್ದೇ ಇಂಥದೊಂದು ಪರಿಸ್ಥಿತಿಯ ನಿರ್ಮಾಣಕ್ಕೆ ಕಾರಣ ಎಂದು ತಮ್ಮತಮ್ಮಲ್ಲೇ ಮಾತಾಡಿಕೊಂಡರು. ಹಿಂದೆ ಎಷ್ಟೋ ಸಲ ನನ್ನ ಕೊಲೆಗೆ ಯತ್ನ ನಡೆದಿತ್ತೆಂದೂ, ಆವಾಗಲೆಲ್ಲ ಇಂಥದೇ ಏನಾದರೊಂದು ಅವಗಢ ಸಂಭವಿಸಿ ಕಡಿಯಲು ಸಾಧ್ಯವೇ ಆಗಲಿಲ್ಲವೆಂತಲೂ, ಈಗಲೂ ಸಾಧ್ಯವಾಗುವುದಿಲ್ಲವೆಂತಲೂ ಜನ ಮಾತಾಡಿಕೊಂಡರು. ಆಗೆಲ್ಲ ನನ್ನೊಳಗಡಗಿರುವ ದೈವತ್ವದ ಬಗ್ಗೆ ನನಗೇ ಹೆಮ್ಮೆಯೆನಿಸಿದರೂ ಯಾವ ಕ್ಷಣದಲ್ಲಾದರೂ ನನ್ನ ಬುಡಕ್ಕೆ ಕೊಡಲಿ ಬೀಳಬಹುದೆಂಬ ಆತಂಕ ಇದ್ದೇ ಇತ್ತು.

ಲಾಕ್‌ಡೌನಿನ ಅವಧಿ ಮಾತ್ರ ಮತ್ತೆರಡು ವಾರ, ಮತ್ತೊಂದು ವಾರ ಎಂದು ವಿಸ್ತರಿಸುತ್ತಲೇ ಹೋಗುತ್ತಿತ್ತು. ಕರ್ಫ್ಯೂ ಇನ್ನೂ ಸಡಿಲಿಸಿರಲಿಲ್ಲ. ಆಗಲೇ ಕಾರ್ಮಿಕರು ಅತಂತ್ರರಾಗಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಸರ್ಕಾರ ಕೆಲಸವಿಲ್ಲದ ಅವರುಗಳು ತಮ್ಮ ತಮ್ಮ ಊರುಗಳತ್ತ ತೆರಳಿದರೆ ಮತ್ತೆ ನಿರ್ಮಾಣ ಚಟುವಟಿಕೆಗಳು ಸ್ತಬ್ಧವಾಗುತ್ತವೆಯೆಂದುಕೊಂಡು, ರಸ್ತೆಮೆಟ್ರೋ ಕಟ್ಟಡದಂಥ ಕೆಲಸಗಳನ್ನು ಪರಸ್ಪರ ಅಂತರ ಕಾಯ್ದುಕೊಂಡು ಮಾಡಬಹುದೆಂಬ ಅವಕಾಶ ನೀಡಿತು. ಅದರಲ್ಲೂ ಯಂತ್ರಗಳಿಂದ ಮಾಡುವ ಕೆಲಸಗಳನ್ನು ನಿರಾತಂಕವಾಗಿ ಮಾಡಬಹುದೆಂದು ತಿಳಿಸಿತು. ಸರ್ಕಾರ ಹಾಗೆನ್ನುತ್ತಿದ್ದಂತೆಯೇ ಚಟುವಟಿಕೆಗಳು ಗರಿಗೆದರಿ ನನ್ನ ಬುಡದ ಸುತ್ತಲೂ ನಿಲ್ಲಿಸಿದ್ದ ಯಂತ್ರಗಳು ಚಾಲೂಗೊಂಡವು.

ದೂರದಲ್ಲಿದ್ದ ಹಿಟಾಚಿಗಳು, ಪಿಶಾಚಿಗಳು ಬಿಲ ಕೊರೆದುಕೊಂಡು ಬರುತ್ತಿರುವಂತೆ ಹತ್ತಿರ ಹತ್ತಿರಕ್ಕೆ ಬರಲಾರಂಭಿಸಿದವು. ಮೊದಲು ಅಂಡರ್‌ಪಾಸಿಗಾಗಿ ಕೊರೆಯುತ್ತಿದ್ದ ಭೂಮಿಯ ಮಣ್ಣನ್ನು ಲಾರಿಗಳಲ್ಲಿ ತುಂಬಿಕೊಂಡು ಸಾಗಿಸಲಾರಂಭಿಸಿದರು. ಯಾವಾಗ ನನ್ನ ಬುಡದ ಬೇರುಗಳು ಅದರ ಹಲ್ಲುಗಳಿಗೆ ಸಿಕ್ಕಿ ಹಾಕಿಕೊಳ್ಳಲಾರಂಭಿಸಿದವೋ ಆವಾಗ ಅಲ್ಲಿಗೆ ಕತ್ತರಿಸುವ ಯಂತ್ರಗಳೂ ಬಂದವು. ಎಲ್ಲೆಲ್ಲಿ ಬೇರುಗಳು ಅಡ್ಡವಾಗುತ್ತವೋ ಅಲ್ಲಲ್ಲೇ ಕತ್ತರಿಸುತ್ತಿದ್ದರು. ನನ್ನ ರೆಂಬೆಗಳಷ್ಟೇ ಗಾತ್ರದ ಬೇರುಗಳನ್ನು ಕಡಿದರೆ ನಾನು ಬದುಕುವುದಾದರೂ ಹೇಗೆ? ಭೂಮಿಯೊಳಗಿನ ಕಡಿತದ ವಿಚಾರ ಮೇಲ್ಮಟ್ಟಕ್ಕೆ ಕಾಣುವಂತಿರಲಿಲ್ಲ. ಮರ ಕಡಿದರೇ ತಾನೇ ಆಕ್ಷೇಪಣೆ, ಬೇರು ಕಡಿದರಲ್ಲವಲ್ಲ!.

ಒಂದೊಂದೇ ಬೇರುಗಳನ್ನು ಕತ್ತರಿಸುತ್ತ ನನ್ನ ಅರ್ಧದಷ್ಟು ಬೇರುಗಳನ್ನು ಕತ್ತರಿಸಿದರೂ ಯಾರಿಗೂ ವಿಷಯವೇ ತಿಳಿಯುತ್ತಿಲ್ಲ. ನನ್ನ